ಏಕ ದೃಷ್ಟಿಯಿಂದ ನೋಡುತ್ತಾರೆ. ಹಳೆಯ ನಾಗರಿಕತೆಯನ್ನು ಅರ್ಥಮಾಡಿಕೊಳ್ಳಲು ಪುರಾತತ್ವ ಶಾಸ್ತ್ರದ ಸಿದ್ಧಾಂತಗಳನ್ನು ಪಾಲಿಸಿ ನೆಲವನ್ನು ಬಗೆದು ನೋಡಿ ಅಲ್ಲಿರಬಹುದಾದ ರಹಸ್ಯಗಳನ್ನು ಬಿಡಿಸುವುದು ಯಾವುದೇ ಪತ್ತೇದಾರಿ ಕೆಲಸಕ್ಕಿಂತ ಭಿನ್ನವಾದದ್ದಲ್ಲ. ಒಂದೇ ಜಾಗದಲ್ಲಿ ಶತಮಾನಗಳ ಹಿಂದಿನ ಮಡಕೆಯ ಚೂರು, ಮತ್ತು ಕೆಲವೇ ತಿಂಗಳುಗಳ ಹಿಂದಷ್ಟೇ ಬಿಸಾಡಿದ ಒಂದು ಪಿಂಗಾಣಿಯೂ ಸಿಗಬಹುದು. ಇದನ್ನು ಬಿಡಿಸಿ, ಅದಕ್ಕೆ ಒಂದು ಕಾಲಮಾನದ ಗುರುತನ್ನು ಕೊಟ್ಟು ನಮ್ಮ ಚರಿತ್ರೆಯನ್ನು ಈ ಮೂಲಕ ಮರುಸೃಷ್ಟಿಸುವುದು ಸರಳವಾದ ಮಾತೇನೂ ಅಲ್ಲ. ಪತ್ತೇದಾರಿ ಕಾದಂಬರಿಗಳನ್ನು ಬರೆಯುತ್ತಿದ್ದ ಲೇಖಕಿ ಅಗಾಥಾ ಕ್ರಿಸ್ಟಿಗೆ ಪುರಾತತ್ವ ಶಾಸ್ತ್ರದಲ್ಲಿ ವಿಶೇಷ ಆಸಕ್ತಿಯಿತ್ತಂತೆ. ಎರಡೂ ಪತ್ತೇದಾರಿಯ ಕೆಲಸವೇ ಎಂದು ಆಕೆ ಹೇಳುತ್ತಿದ್ದರಂತೆ!

ನಗರಗಳು ಹುಟ್ಟುವುದಕ್ಕೆ ಮುನ್ನವೇ, ಮಾನವರು ತಮ್ಮ ಸೌಂದರ್ಯ ಪ್ರಜ್ಞೆಯನ್ನು ಪ್ರಯೋಗಿಸಲು ಪ್ರಾರಂಭಿಸಿದ್ದರು. ನಿತ್ಯಜೀವನವನ್ನು ಸುಲಲಿತಗೊಳಿಸಲು ಅಗತ್ಯವಿರುವ ಪರಿಕರಗಳನ್ನು ರೂಪಿಸುವುದಲ್ಲದೇ, ಆ ಪರಿಕರಗಳಿಗೆ ಒಂದು ವಿಶಿಷ್ಟ ಅಸ್ತಿತ್ವ ಮತ್ತು ಪ್ರತ್ಯೇಕತೆಯನ್ನು ಕೊಡುವುದಕ್ಕಾಗಿ ಅಲಂಕಾರಗಳನ್ನೂ ಮಾಡುತ್ತಿದ್ದರು. ಮಣಿಗಳು ಕವಡೆ, ಚಿಪ್ಪು ಮತ್ತು ಅವುಗಳ ಬಣ್ಣ - ಆಕಾರಗಳನ್ನು ಕೂಡಿಸಿ ಸುಂದರವಾದ ವಸ್ತುಗಳನ್ನು ತಯಾರಿಸುವುದು, ಮತ್ತು ಅವುಗಳ ವಿನಿಮಯದಲ್ಲೇ ವ್ಯಾಪಾರದ ಮೊದಲ ಹಂತವನ್ನೂ ಗುರುತಿಸಬಹುದೇನೋ. ಆಹಾರ ಮತ್ತು ಇತರ ಜೀವನವಶ್ಯಕ ವಸ್ತುಗಳನ್ನು ಮೀರಿ ಬಿಮ್ಮನ್ನು ತೋರಿಕೊಳ್ಳುವುದು ಕೇವಲ ಮೈಥುನದ ಆಹ್ವಾನಕ್ಕಾಗಿ ಮಾತ್ರ ಉಳಿಯಲಿಲ್ಲ. ಅದು ಕಾರಣವಿಹೀನವಾಗಿಯೂ ನಮ್ಮನ್ನು ಆಕ್ರಮಿಸಿಕೊಂಡಿತು. ಮೈ ಮುಚ್ಚಲು ಆಕರ್ಷಕ ಬಟ್ಟೆ ಬೇಕೆನ್ನುವುದು ಸಹಜವೇ ಆದರೂ, ಕತ್ತಿಗೆ ಸುತ್ತಿಕೊಂಡು ನೇತುಬಿಡುವ ಟೈ ಅನವಶ್ಯಕವಾದ ಅಲಂಕಾರ ಎಂದು ಮೊನಿಕಾ ವಾದಿಸುತ್ತಾರೆ. ಅನವಶ್ಯಕ ವಸ್ತುಗಳ ಉತ್ಪಾದನೆ, ಅವುಗಳನ್ನು ಪಡೆದು ಸಂಗ್ರಹಿಸಿ - ಅವುಗಳ ಮಾಲೀಕತ್ವವನ್ನು ಪಡೆಯಬೇಕೆನ್ನುವ ಬೌದ್ಧಿಕತೆಯೇ ನಮ್ಮನ್ನು ವ್ಯಾಪಾರದತ್ತ ಕೊಂಡೊಯ್ದಿತೇ?

ನಗರೀಕರಣವನ್ನು ಅರ್ಥಮಾಡಿಕೊಳ್ಳುವ ನಿಟ್ಟಿನಲ್ಲಿ ಗಮನಿಸಬೇಕಾದ್ದು ಬಹಳಷ್ಟಿದೆ. ಪುರಾತತ್ವ ಶಾಸ್ತ್ರದವರು ಸುಂದರ ವಸ್ತುಗಳನ್ನು ಕಂಡುಹಿಡಿದು, ನಮ್ಮ ಗತ ಎಷ್ಟು ಅದ್ಭುತವಾಗಿತ್ತೆನ್ನುವುದನ್ನು ನಿರೂಪಿಸಲು ಯತ್ನಿಸುತ್ತಾರೆ. ಆದರೆ, ನಿಜಕ್ಕೂ ಚರಿತ್ರೆಯನ್ನು ಬಗೆದವರಿಗೆ ಗೊತ್ತಿರುವುದು ಆ ಸೌಂದರ್ಯದ ಹಿಂದೆ ಅನೇಕ ಕುರೂಪಗಳೂ ಮತ್ತು ದುಃಖದ ಕಥೆಗಳೂ ಇರುತ್ತವೆ ಎನ್ನುವ ಮಾತು. ಮೊನಿಕಾ ಹೇಳುತ್ತಾರೆ: ಯಾವುದೇ ನಗರ ಮತ್ತು ಅದರ ಆಯಾಮಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ನಗರದ ಭವ್ಯ ಇಮಾರತುಗಳ ಬಳಿಗೆ ಹೋಗದೇ, ನಗರದ ತ್ಯಾಜ್ಯ ಪರ್ವತವನ್ನು ನೋಡಬೇಕು. ಘನತ್ಯಾಜ್ಯವನ್ನು ನೋಡಿದಾಕ್ಷಣ ನಗರದ ಜಾಯಮಾನ ಸ್ಪಷ್ಟವಾಗಿ ಗೊತ್ತಾಗುತ್ತದೆ. ಆ ನಗರದಲ್ಲಿ ಯಾರು ಏನನ್ನು ಸೇವಿಸುತ್ತಾರೆ, ಯಾವ ಘಟ್ಟದಲ್ಲಿ ಬೇಸತ್ತು ವಸ್ತುಗಳನ್ನು ಬಿಸಾಕುತ್ತಾರೆ. ಹೀಗೆ ತ್ಯಜಿಸಿದ್ದನ್ನು ಹೇಗೆ ನಿಭಾಯಿಸುತ್ತಾರೆ - ಈ ಎಲ್ಲವನ್ನೂ ನೋಡಿದಾಗ ನಗರದ ಸಂಸ್ಕೃತಿಯ ಬಗ್ಗೆಯೂ ಒಳನೋಟಗಳು ಸಿಗಬಹುದು.

ನಗರಗಳ ನಿಜ ಸ್ವರೂಪ ತಿಳಿಯುವುದು ಒಟ್ಟಾರೆ ಬಳಕೆ ಹೇಗೆ ನಡೆಯುತ್ತದೆ, ಅದರ ದಿಕ್ಕುದೆಸೆ ಏನು ಎನ್ನುವುದರಲ್ಲಿ. ಆಧುನಿಕ ಮಾನವರು ಪರಿಸರದ ಬಗ್ಗೆ ಸಂವೇದನಾಶೀಲರಾಗಿ 'ರೆಡ್ಯೂಸ್' (ಕಮ್ಮಿ ಬಳಸು), 'ರೀಯೂಸ್' (ಮರುಬಳಕೆ), 'ರೀಸೈಕಲ್' (ಮರು ಉತ್ಪಾದನೆ) ಎನ್ನುವ ಮಂತ್ರವನ್ನು ತಮ್ಮದಾಗಿಸಿಕೊಂಡಿರುವುದನ್ನು ನೋಡಬಹುದು. ಆದರೆ, ಇದು ನಿಜಕ್ಕೂ ಸಾಧ್ಯವಾಗುವ ಮಾತೇ? ಈ ಪ್ರಶ್ನೆಯನ್ನು ತಮ್ಮ ಉತ್ಖನನದ ಅನುಭವ ಮತ್ತು ಸಮಕಾಲೀನ ಸಮಾಜವನ್ನು ಗಮನಿಸುವ ಅನುಭವದಿಂದ ಮೊನಿಕಾ ಕೇಳುತ್ತಾರೆ. ಕಾಫಿಯಂಗಡಿಯಲ್ಲಿ 'ಟೇಕ್ ಅವೇ' ಎಂದು ಕೊಡುವ ಒಂದು ಕಾಫಿ ಲೋಟವನ್ನು ಮರುಬಳಕೆ ಮಾಡಬೇಕೆಂದರೆ ಅದನ್ನು ಕಾಪಿಟ್ಟು, ತೊಳೆದು ಮತ್ತಿನ್ನೇನನ್ನಾದರೂ ತುಂಬಿಸಿ ಸೇವಿಸಬೇಕು. ಇದು ಸಾಧ್ಯವಾಗುವ ಮಾತೇ? ಮರುಬಳಕೆ ಕಷ್ಟದ್ದು. ಆದರೆ, ಮಾಡಲು ಸಾಧ್ಯವಾದದ್ದು ಅದೊಂದೇ. ರೆಡ್ಯೂಸ್ - ಬಳಕೆಯನ್ನು ಕಮ್ಮಿ ಮಾಡುವುದು